ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 955 |
| ಸದಸ್ಯರ ಹೆಸರು | : | ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21-09-2022 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಪ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಸುರಿದಂತಹ ಭಾರಿ ಮಳೆಗೆ ಹಾಗೂ ತುಂಗಭದ್ರಾ ಪ್ರವಾಹದಿಂದ ಹಲವಾರು ರಸ್ತೆಗಳು ಮತ್ತು ಸಿಡಿಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಬಂದಿದ್ದಲ್ಲಿ, ಸರ್ಕಾರವು ಈ ವರೆವಿಗೂ ಕೈಗೊಂಡ ಕ್ರಮಗಳಾವುವು; | **ರಾಯಚೂರು** ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ-150A ಕಿಮೀ.89.300 (ತಿಂಥಣಿ ಬ್ರಿಡ್ಜ) ರಿಂದ 198.920 (ತುಂಗಭದ್ರಾ ಬಿಡ್ಜ್) ರವರೆಗೆ ಒಟ್ಟು ಉದ್ದ 109.62 ಕಿ.ಮೀ. ಇರುತ್ತದೆ. ಪ್ರಸಕ್ತ ಸಾಲಿನಲ್ಲಿ ಸುರಿದ ಮಳೆಯಿಂದ ಹಾಳಾದ ರಾಷ್ಟ್ರೀಯ ಹೆದ್ದಾರಿಗಳನ್ನು ಪ್ರವಾಹ ಹಾನಿ ದುರಸ್ತಿ ಯೋಜನೆಯಡಿಯಲ್ಲಿ ಈ ಕೆಳಗಿನ 3 ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. |
| ಇ) | ಈ ವರೆವಿಗೂ ಎಷ್ಟು ರಸ್ತೆ ಸಿಡಿಗಳ ಕಾಮಗಾರಿಯು ಪೂರ್ಣಗೊಂಡಿವೆ? (ವಿವರ ನೀಡುವುದು) | |

| ಕ್ರಮ ಸಂ. | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) | ಈ ಕಛೇರಿ ಪತ್ರ ಸಂಖ್ಯೆ. |
|---|---|---|---|
| 1. | Repairs to Major Bridge on NH 150A Jevargi Chamarajnagar Section @ Ch 94.438 near Golapalli Village. | 36.70 | 1439 ದಿ: 01.08.2022 |
| 2 | Restoration Flood of Damaged carriage way and Bridge approaches by Providing WMM DBM, and BC for worn out portion & Patching of potholes in selected reaches from Km 184.700 (Venkateshwar camp) to Km.198.920 (Tungabhadra Bridge) of NH-150A Jewaragi Chamarajnagar Section in the State of Karnataka | 55.53 | 1544 ದಿ:12.08.2022 |
| 3 | Rectification of damaged carriageway from Km 162.050 to 162.305 and Km 163.500 to Km 164.00 of NH-167 | 5.00 | 16.09.2022 |

| | | |
|---|---|---|
| | | ಈ ಮೇಲಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಅನುಮೋದನೆ ದೊರೆತ ನಂತರ ಇಲಾಖಾ ನಿಯಮದನ್ವಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.<br><br>**ಕೊಪ್ಪಳ** ಜಿಲ್ಲೆಯಲ್ಲಿ ಸುರಿದಂತಹ ಭಾರಿ ಮಳೆಗೆ ಹಾಗೂ ತುಂಗಭದ್ರಾ ಪ್ರವಾಹದಿಂದ ಯಾವುದೇ ರಾಷ್ಟ್ರೀಯ ಹೆದ್ದಾರಿಗಳು ಮತ್ತು ಸಿಡಿಗಳು ಹಾಳಾಗಿರುವುದಿಲ್ಲ.<br><br>ಪ್ರಸಕ್ತ ಸಾಲಿನಲ್ಲಿ ಈಶಾನ್ಯ ವಲಯಕ್ಕೆ ರೂ.500.00 ಲಕ್ಷಗಳ ಅನುದಾನವನ್ನು ಅತಿವೃಷ್ಟಿಯಿಂದ ಹಾನಿಗೊಳಗಾದ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆಗೊಳಿಸಿದ್ದು, ಅದರಲ್ಲಿ **ರಾಯಚೂರು** ವಿಭಾಗಕ್ಕೆ 11.10 ಕಿ.ಮೀ. ಉದ್ದ, 1 ಸಿಡಿ 1 ಬ್ರಿಡ್ಜ್ ಅಪ್ರೋಚಸ್ ನಿರ್ವಹಣೆಗೆ ರೂ.150.00 ಲಕ್ಷಗಳು & **ಕೋಪ್ಪಳ** ವಿಭಾಗಕ್ಕೆ 24.40 ಕಿ.ಮೀ, 1 ಸಿಡಿ, 1 ಸೇತುವೆ, 2 ಹಾರ್ಡ ಪ್ಯಾಸೇಜ್, 1 ರಕ್ಷಣಾ ಗೋಡೆ ನಿರ್ವಹಣೆಗೆ ರೂ.70.00 ಲಕ್ಷಗಳ ಅನುದಾನ ಹಂಚಿಕೆ ಮಾಡಲಾಗಿದೆ. ಅದರಂತೆ ಸದರಿ ವಿಭಾಗಳಿಂದ ಅಂಧಾಜು ಪತ್ರಿಕೆ ತಯಾರಿಸಿ ಅನುಮೋದನೆ ಪಡೆಯಲಾಗುತ್ತಿದೆ.<br><br>ಪ್ರಸಕ್ತ ಸಾಲಿನಲ್ಲಿ **ರಾಯಚೂರು** ವ್ಯಾಪ್ತಿಯ ರಸ್ತೆಗಳ 3054 ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆ ಮತ್ತು ಸೇತುವೆ ನಿರ್ವಹಣೆಗಾಗಿ ರೂ. 1834.00 ಲಕ್ಷಗಳಿಗೆ ಕ್ರಿಯಾ ಯೋಜನೆ ಅನುಮೋದನೆಗೊಂಡು ಕಾಮಗಾರಿಗಳು ಕೈಗೊಳ್ಳಲಾಗುತ್ತಿದೆ. **ಕೊಪ್ಪಳ** ವ್ಯಾಪ್ತಿಯ ರಸ್ತೆಗಳ 3054 ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆ ಮತ್ತು ಸೇತುವೆ ನಿರ್ವಹಣೆಗಾಗಿ ರೂ.1125.00 ಲಕ್ಷಗಳಿಗೆ ಕ್ರಿಯಾ ಯೋಜನೆ ಅನುಮೋದನೆಗೊಂಡು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.<br><br>ಲೋಕೋಪಯೋಗಿ ಇಲಾಖೆಯ ಈಶಾನ್ಯ ವಲಯದ ವ್ಯಾಪ್ತಿಯಲ್ಲಿ ಪ್ರವಾಹದಿಂದ ಹಾಳಾದ ರಸ್ತೆ ಸಿ.ಡಿ.ಗಳಿಗೆ ಅವಶ್ಯಕತೆ ಅನುಗುಣವಾಗಿ ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿರುತ್ತದೆ. |

ಕಡತ ಸಂಖ್ಯೆ: ಲೋಇ 198 ಸಿಐಎಸ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು